**ಕರ್ನಾಟಕ ಸರ್ಕಾರ**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.269/2021**

ಪಿ.ಡಬ್ಲ್ಯೂಃ 2

ಸಿ.ಡಬ್ಲ್ಯೂಃ 4

| | | |
|---|---|---|
| ಸಾಕ್ಷಿದಾರರ **ಹೆಸರು** | ಃ | ಬಾಬ್ಲುನಾಯ್ಕ |
| ತಂದೆ **ಹೆಸರು** | ಃ | ಗೋವಿಂದನಾಯ್ಕ |
| ವಯಸ್ಸು | ಃ | 44 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| **ವಾಸಸ್ಥಳ** | ಃ | ಕರಕುಚ್ಚಿ ತಾಂಡ್ಯ |

**ದಿನಾಂಕಃ 23-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಈಗ್ಗೆ ಸುಮಾರು 3-4 ವರ್ಷಗಳ ಹಿಂದೆ ಕರಕುಚ್ಚಿ ಗ್ರಾಮದಲ್ಲಿ ನಾನು ನಡೆದುಕೊಂಡು ಹೋಗುವಾಗ ಪೊಲೀಸರ ಕೋರಿಕೆಯ ಮೇರೆಗೆ ಮದ್ಯದ ವಿಚಾರವಾಗಿ ಮಹಜರ್ ಮಾಡಿದ್ದು, ಸದರಿ ದಾಖಲಾತಿಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿ ನಿಪಿ-8 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ</u>** <u>ಸಹಾಯಕ ಸರ್ಕಾರಿ ಅಭಿಯೋಜಕರವರಿಂದ</u>

ದಿನಾಂಕಃ **04-09-2020** ರಂದು ಬೆಳಿಗ್ಗೆ **9-00** ರಿಂದ **10-00** ಗಂಟೆಯವರೆಗೆ ಲಕ್ಕವಳ್ಳಿ ಹೋಬಳಿ, ಕರಕುಚ್ಚಿ ಗ್ರಾಮದ **1** ನೇ ಆರೆವೇಪಿಯ ಜಮೀನಿನ ಹತ್ತಿರ ಭದ್ರಾ ಹೊಳೆ ಹತ್ತಿರ ಆರೋಪಿತರು ಅಕ್ರಮವಾಗಿ ಮರಳನ್ನು ಟ್ರಾಕ್ಟರ್ ನಲ್ಲಿ ದಾಸ್ತಾನು ಮಾಡಿರುತ್ತಾರೆಂಬ ವಿಚಾರವಾಗಿ ಪೊಲೀಸರು ಮಹಜರ್ ಮಾಡಿರುತ್ತಾರೆಂದರೆ ಸರಿ. ನಿಮ್ಮ ಸಮಕ್ಷಮ ಕೆಎ **66** ಟಿ **0945** ನಂಬರಿನ ಬಿಳಿ ಮತ್ತು ನೀಲಿ ಬಣ್ಣದ ಸ್ವರಾಜ್ ಕಂಪನಿಯ ಟ್ರಾಕ್ಟರ್ ನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಿಮಗೆ ಎಲ್ಲಾ ವಿಚಾರ ತಿಳಿದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ.</u>**

ಪೊಲೀಸರು ಯಾವ ವಿಚಾರಕ್ಕೆ ನನ್ನನ್ನು ಕರೆದರು ಎಂದು ನನಗೆ ತಿಳಿದಿರುವುದಿಲ್ಲ.

**<u>ಮರುವಿಚಾರಣೆ</u>ಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ **ಹೆಚ್ಚುವರಿ** ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**